ಅ.ದಾ.01/2023 ಡಿಡಬ್ಲ್ಯೂ-1

ದಿನಾಂಕಃ 21.07.2026 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.

**<u>ಪಾಟೀ ಸವಾಲು: ವಾದಿ ಪರ ವಕೀಲರಿಂದ:</u>**

1. ನನ್ನ ಮದುವೆಯಾಗಿ 45 ವರ್ಷವಾಗಿದೆ. ನನ್ನ ಸ್ವಂತ ಊರು ದೇವಾಲದ ಕೆರೆ, ಸಕಲೇಶಪುರ ತಾಲ್ಲೂಕು.

2. ವಾದಿಯವರ ತಂದೆ ದ್ಯಾವಪ್ಪ ಗೌಡರವರನ್ನು ನಾನು ನೋಡಿದ್ದೆ. ದ್ಯಾವಪ್ಪಗೌಡರವರ ತಾಯಿಯ ಹೆಸರು ನನಗೆ ಗೊತ್ತಿಲ್ಲ.

3. ದ್ಯಾವಪ್ಪಗೌಡರವರು ಮರಣ ಹೊಂದಿ 4-5 ವರ್ಷವಾಗಿರಬಹುದು.

4. ದಾವ ಸ್ವತ್ತು ನಮ್ಮದು ಎಂದು ಅವರು ದಾವೆ ಹಾಕಿರುತ್ತಾರೆ.

5. ಸ.ನಂ.73/9 ರಲ್ಲಿ 2 ಎಕರೆ 14 ಗುಂಟೆ ನಮ್ಮ ಜಮೀನು ಇದ್ದು, ಸದರಿ ಜಾಗವನ್ನು ವಾದಿಯವರು ನಮ್ಮದು ಎಂದು ದಾವೆ ಹಾಕಿರುತ್ತಾರೆ. ಸದರಿ ಜಮೀನಿನ ಪಹಣಿ ನನ್ನ ಪತ್ನಿ ಜಯಕುಮಾರಿ ರವರ ಹೆಸರಿನಲ್ಲಿ ಇದೆ. 2007 ರಿಂದ ಅವರ ಹೆಸರಿನಲ್ಲಿ ಪಹಣಿ ಬರುತ್ತಿದೆ. ಅವರ ತಂದೆ ರಾಮೇಗೌಡರವರಿಂದ ಪೌತಿ ಖಾತೆಯಾಗಿ ಜಯಕುಮಾರಿಯವರಿಗೆ ಬಂದಿದೆ. ರಾಮೇಗೌಡರವರಿಗೆ ಒಬ್ಬಳೇ ಮಗಳು.

6. ರಾಮೇಗೌಡರವರಿಗೆ ಬೇರೆ ಜಮೀನುಗಳು ಇವೆ. ಸ.ನಂ.70 ರಲ್ಲಿ 5 ಎಕರೆ 18 ಗುಂಟೆ, 270 ರಲ್ಲಿ 20 ಗುಂಟೆ, ಸ.ನಂ.67 ರಲ್ಲಿ 4 ಗುಂಟೆ ಜಮೀನು ಇದೆ. ಸದರಿ ಜಮೀನುಗಳು ಸಹಾ ಜಯಕುಮಾರಿ ರವರ ಹೆಸರಿನಲ್ಲಿ ಇವೆ.

7. ಸದರಿ ಜಮೀನುಗಳು ರಾಮೇಗೌಡರವರಿಗೆ ಯಾವ ರೀತಿ ಬಂದಿದೆ ಎಂದರೆ? ಅದರ ಬಗ್ಗೆ ನನಗೆ ಮಾಹಿತಿ ಇಲ್ಲ.

8. ನನಗೆ 3 ಜನ ಮಕ್ಕಳು. ನಮ್ಮ ಲಿಖಿತ ಹೇಳಿಕೆ ಸಲ್ಲಿಸಲು ನಾನೇ ಮಾಹಿತಿ ಸಲ್ಲಿಸಿರುತ್ತೇನೆ.

9. ನಾನು ನ್ಯಾಯಾಲಯಕ್ಕೆ ಪಹಣಿ ಮತ್ತು ಇತರೆ ದಾಖಲೆಗಳನ್ನು ಕೊಟ್ಟಿದ್ದೇನೆ. ನಿಖರವಾಗಿ ಈಗ ಹೇಳಲು ಆಗುವುದಿಲ್ಲ. ರಾಮೇಗೌಡರವರಿಗೆ ಯಾವ ರೀತಿ ದಾವ ಸ್ವತ್ತು ಬಂದಿದೆ ಎಂದು ದಾಖಲೆ ನೀಡಿಲ್ಲ.

10. ಸ.ನಂ.73/9 ರ 2 ಎಕರೆ 14 ಗುಂಟೆ ಜಮೀನಿನ ಚೆಕ್ಕುಬಂದಿಃ

ಪೂರ್ವಕ್ಕೆ - ಸಾರ್ವಜನಿಕ ರಸ್ತೆ

ಪಶ್ಚಿಮಕ್ಕೆ - ಅಣ್ಣಪ್ಪಗೌಡರವರ ಜಮೀನು

ಉತ್ತರಕ್ಕೆ - ಮಂಜುನಾಥ್ ರವರ ಜಮೀನು

ದಕ್ಷಿಣಕ್ಕೆ - ಗೋಪಮ್ಮ ನವರ ಜಮೀನು.

11. ದಾವ ಸ್ವತ್ತಿನ ಚೆಕ್ಕುಬಂದಿಃ

ಪೂರ್ವಕ್ಕೆ - ದೇವೇಂದ್ರ ಅಂದರೆ ನಿಮ್ಮ ಜಮೀನು ಎಂದರೆ ಸರಿ.

ಪಶ್ಚಿಮಕ್ಕೆ - ರಮೇಶ್ ರವರ ಜಮೀನು ಎಂದರೆ ಸರಿಯಲ್ಲ. ಅಣ್ಣಪ್ಪಗೌಡರವರ ಜಮೀನು

ಉತ್ತರಕ್ಕೆ - ರಸ್ತೆ ಇದೆ ಎಂದರೆ ಸರಿಯಲ್ಲ. ಮಂಜುನಾಥ್ ರವರ ಜಮೀನು

ದಕ್ಷಿಣಕ್ಕೆ - ರಸ್ತೆ ಇದೆ. ನಂತರ ನನ್ನ 18 ಗುಂಟೆ ಜಾಗ ಇದೆ.

12. ದಾವ ಸ್ವತ್ತಿನಲ್ಲಿ ವಾದಿಯವರು ಮನೆ ಕಟ್ಟಿಕೊಂಡು ಅವರು ಸ್ವಾಧೀನದಲ್ಲಿ ಇದ್ದಾರೆ ಎಂದರೆ? ನಮ್ಮ ಜಾಗದಲ್ಲಿ ನಾವು ಕಟ್ಟಿದ ಮನೆಯಲ್ಲಿ ಅವರು ವಾಸವಿದ್ದಾರೆ ಎಂದು ನುಡಿಯುತ್ತಾರೆ. ನಾವು ಕಟ್ಟಿದ್ದು ಹಂಚಿನ ಮನೆ.

13. ಸದರಿ ಮನೆಯಲ್ಲಿ 3-4 ಕೋಣೆಗಳು ಇವೆ. ಸದರಿ ಮನೆಯನ್ನು ನಾವು ಕಟ್ಟಿ 7-8 ವರ್ಷವಾಗಿದೆ. ಸೀತಮ್ಮ ನವರು ಸದರಿ ಮನೆಯನ್ನು ವಾಸಕ್ಕೆ ಕೇಳಿದ್ದರು. ಹಾಗಾಗಿ ನಾವು ಸ್ವಲ್ಪ ದಿನ ಇರಲು ಅವರಿಗೆ ಅವಕಾಶ ಮಾಡಿಕೊಟ್ಟಿರುತ್ತೇವೆ.

14. 2-3 ವರ್ಷವಾದ ಮೇಲೆ ನಾವು ಅವರನ್ನು ಖಾಲಿ ಮಾಡಲು ಹೇಳಿರುತ್ತೇವೆ. ಆ ರೀತಿ ಅವರನ್ನು ಕೇಳಿ 15 ವರ್ಷವಾಗಿದೆ.

15. ನಾವು ಕಟ್ಟಿದ ಮನೆ 30x20 ಅಳತೆ ಇತ್ತು. ಅದಕ್ಕೆ ಸಂಬಂಧಪಟ್ಟ ಖಾತೆ ಇರಲಿಲ್ಲ. ಖಾತೆ ಮಾಡಿಸಿಕೊಳ್ಳಲು ನಾನು ಪ್ರಯತ್ನ ಮಾಡಿಲ್ಲ.

16. ವಾದಿಯವರಿಗೆ ಸಂಬಂಧಪಟ್ಟದ್ದೆಂದು ನನಗೆ ಸಂಬಂಧಪಟ್ಟದ್ದು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲಿಗೆ ಕಾಲವಕಾಶ ಕೋರಿದ್ದು ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

ಪ್ರಧಾನ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.